



ಸ್ಕೂಲಿನಿಂದ ಬಂದ ಮಗನ ಬ್ಯಾಗ್‌ನಲ್ಲಿ ಕಂಡ ಪೆನ್ನು, ಪೆನ್ಸಿಲ್ಲುಗಳನ್ನು ನೋಡಿ 'ನಿಜ ಬೊಗಳು... ಎಲ್ಲಿಂದ ಕದ್ದು ತಂದಿದ್ದೀಯ?'

ಅಪ್ಪನ ಗದರಿಕೆಗೆ ಹೆದರಿದ ಮಗ 'ತಪ್ಪಾಯ್ತಪ್ಪಾ, ಗೆಳೆಯರ ಬ್ಯಾಗ್‌ನಿಂದ ಕದ್ದಿದ್ದೆ' ಎಂದ.

ಕೋಪಗೊಂಡ ತಂದೆ ಮಗನನ್ನು ಹಿಗ್ಗಾಮುಗ್ಗಾ ಥಳಿಸತೊಡಗಿದ

'ಯಾಕ್ರಿ ಅವನನ್ನ ಅಷ್ಟೊಂದ್ ಹೊಡೀತಿದ್ದೀರಾ?' ಅಡುಗೆ ಮನೆಯಿಂದ ಓಡಿ ಬಂದ ಹೆಂಡತಿ ಕೇಳಿದಳು.

ಬೇರೆಯವರ ಬ್ಯಾಗ್‌ನಿಂದ ಪೆನ್ನು, ಪೆನ್ಸಿಲ್ಲು ಕದ್ದು ತಂದಿದ್ದಾನೆ ಸ್ಟುಪಿಡ್. ನನಗೆ ಹೇಳಿದ್ರೆ ನಾನೆ ತಂದು ಕೊಡ್ತಿರ್ಲಿಲ್ವಾ... ನಮ್ ಆಫೀಸ್‌ನಲ್ಲಿ ಬರೆಯೋರು ದಿಕ್ಕಿಲ್ಲದೇ ಬಿದ್ದಿದ್ದಾವೆ!

★★★

'ಲೇ ಮಂಗ್ಯಾನ ಮಗನ... ಬಾರಲೇ ಇಲ್ಲೆ.'

ಉತ್ತರ ಕರ್ನಾಟಕಕ್ಕೆ ಪ್ರವಾಸಕ್ಕೆಂದು ಬಂದಿದ್ದ ಶಣ್ಯೆ ಅವರಿಗೆ ತಮ್ಮ ಮಾರ್ಗದರ್ಶಿ ತನ್ನ ಸಹಚರನಿಗೆ ಹಾಗಂತ ಕರೆದದ್ದು ಸ್ವಲ್ಪವೂ ಇಷ್ಟವಾಗಲಿಲ್ಲ.

'ಏನ್ ಸಾರ್. ನಿಮ್ಮ ಹುಡುಗನಿಗೆ ಅಷ್ಟೊಂದು ಕಠೋರವಾಗಿ ಬಯ್ಯುತ್ತಿದ್ದೀರಲ್ಲ, ಅದರರ್ಥ ಏನು?'

ಅದರಲ್ಲೇನು ದೊಡ್ಡ ವಿಷಯ ಇದೆ ಬಿಡಿಸಾರ್... ಮಂಗನಿಂದ ಮಾನವ ಅಂತ ಹೇಳುವ ಬದಲಾಗಿ ನಾವು 'ಮಂಗ್ಯಾನ ಮಗ' ಅಂತೀವಿ ಅಷ್ಟೆ!

(ಸಂಗ್ರಹ) ಚಂದ್ರಶೇಖರ ಮಾಡಲಗೇರಿ, ಹುಬ್ಬಳ್ಳಿ

### ಪೆದ್ದ ಕಳ್ಳ

ಪೊಲೀಸ್: ನಿಜ ಹೇಳು; ಇಲ್ಲದಿದ್ದರೆ ಪ್ಯಾಂಟ್ ಕಳಚಿ ಬಾಸುಂಡೆ ಬರುವವರೆಗೆ ಬಾರಿಸುತ್ತೇನೆ.

ಕಳ್ಳ: ಅಯ್ಯೋ ಬುದ್ಧಿ.. ಕಳ್ಳತನ ಮಾಡಿದ್ದು ನಾನು, ಅದಕ್ಕೆ ನೀವೇಕೆ ಪ್ಯಾಂಟ್ ಕಳಚುತ್ತೀರಿ?

### ಇಷ್ಟಾ ಪೂರ್ತಿ



ಗ್ರಾಹಕ: ನಿಮ್ಮಪ್ಪನ ಮಿಠಾಯಿ ಅಂಗಡಿಯಲ್ಲಿ ನಿನಗೆ ಮಿಠಾಯಿ ತಿನ್ನಲು ಆಸೆಯಾಗುವುದಿಲ್ಲವೆ ಮರಿ?

ಪುಟ್ಟ : (ಪಿಸು ಮಾತಿನಲ್ಲಿ) ತುಂಬಾ ಆಸೆಯಾಗುತ್ತದೆ ಅಂಕಲ್... ಆದರೆ ರಸಗುಲ್ಲಾ, ಜಾಮೂನುಗಳನ್ನು ಅಪ್ಪ ಎಣಿಸಿಟ್ಟು ಹೋಗ್ತಾರೆ; ಆದ್ದರಿಂದ ಯಾರೂ ಇಲ್ಲದಾಗ ಅವುಗಳನ್ನು ಚೀಪಿ ನಂತರ ಹಾಗೇ ಇಟ್ಟು ಬಿಡುತ್ತೇನೆ...!

### ಬದಲಿ ವ್ಯವಸ್ಥೆ

ರಾಮು: ಅಕಸ್ಮಾತ್ತಾಗಿ ನಾನೊಂದು ಬೀಗದ ಕೈ ನುಂಗಿಬಿಟ್ಟಿದ್ದೇನೆ.

ಡಾಕ್ಟರ್: ಯಾವಾಗ?

ರಾಮು: ಮೂರು ತಿಂಗಳ ಹಿಂದೆ.

ಡಾಕ್ಟರ್: ಅಂದಿನಿಂದ ಈತನಕ ಹೇಳದೆ ಏನು ಮಾಡುತ್ತಿದ್ದೇ?

ರಾಮು: ಡೂಪ್ಲಿಕೇಟ್ ಬೀಗದ ಕೈ ಉಪಯೋಗಿಸುತ್ತಿದ್ದೆ ಡಾಕ್ಟರ್!

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

